## ಕಲ್ಪನೆ ಕಾವ್ಯ



### ಕಲ್ಪನೆ

ಗರಗರನೆ ತಿರುಗುತಿದೆ
ರಿಂಗಿನ ರಂಗಿನಾಟ
ನೆತ್ತಿಯ ಮೇಲೆ ಸುತ್ತುತಿದೆ
ಮನಸೂರೆಗೊಳ್ಳುವ ಮಾಟ

ಚತುರತೆಯ ನಡುವಿನಲಿ
ಜೀವ ಬದುಕಿನ ಜಂಜಾಟ
ನೋಡುಗರ ಮನಸ್ಸಿಗೆ
ಸಂಭ್ರಮದ ಖುಷಿಯಾಟ

ಎದ್ದೆನೋ ಬಿದ್ದೆನೋ
ಎಂಬ ಭವಿಷ್ಯದ ಸಂಕಟ
ಆದರೂ ನಡೆಯಲೇಬೇಕು
ನಮ್ಮ ಜೀವಕೆ ತುತ್ತಿನೂಟ

ತಿರುಗು ರಿಂಗಿನ ನಡುವೆ
ನೆರೆದ ಎಲ್ಲರ ನೋಟ
ನೆತ್ತಿ ಮೇಲಿನ ಪೇಟ
ನನ್ನ ಜೊತೆಗಿನ ಬಂಟ

ಮುಸುಕು ಹೊದ್ದ ಸಂಭ್ರಮದಲ್ಲೂ
ನಡೆಯುತ್ತಿದೆ ಸಂತಸದ ಕೂಟ
ನೀನನಗಿದ್ದರೆ ನಾನಿನಗೆ
ಎಂಬ ಬದುಕಿನ ಪಾಠ

**-ಎಸ್. ನಾಗಲಕ್ಷ್ಮಿ, ಬೆಂಗಳೂರು**

### ಸೌಹಾರ್ದವೇ ಸಂಭ್ರಮ

ಬದುಕೊಂದು ಹೋರಾಟ
ನಿತ್ಯವೂ ನಡೆದಿದೆ ಕಸರತ್ತು
ಜೀವಜೀವಗಳ ನಡುವಿನ ಸೌಹಾರ್ದ
ಎದುರಿಸಿ ಮುನ್ನುಗ್ಗಲು ನೀಡಿದೆ ತಾಕತ್ತು

ಬಣ್ಣಬಣ್ಣದ ಚಕ್ರಗಳ ತಿರುಗಿಸಿ
ಪ್ರೀತಿ ತುಂಬಿದ ಕರಗಳು
ಕನಸುಗಳ ಹಂಚುತ ಸಾಗಿವೆ
ನೋವಿಗೆ ನಗೆಯ ಹೊಳಪ ಲೇಪಿಸಿ

ಸಂತಸವೆಂಬುದು ಸಂತೆಯ ಸರಕಲ್ಲ
ಶ್ರಮದ ಬೆವರಿನೊಳಗೆ ಅವಿತ ಮುತ್ತು
ಕಲೆ ಎಂದರೆ ಬರಿ ಸ್ವಾರ್ಥವಲ್ಲ
ಸಂಭ್ರಮದ ಜೀವ ಸೆಲೆ

ಭೇದಭಾವ ತೊರೆದ ಮನಗಳಿಗೆ
ಬಾಳ್ವೆಯೊಂದು ವರ
ನಾನು ನೀನು ಎಂಬುದ ಮರೆತು
ನಾವು ಎಂದಾಗ ಹೊಮ್ಮುವುದು ಸುಸ್ವರ

**-ಭವ್ಯ ಟಿ.ಎಸ್., ಹೊಸನಗರ**